ದಿ: 13/08/2025 ರಂದು (ಚುಕ್ಕೆರಹಿತ) 90

1561-72-10

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಸಿ.ಟಿ.ರವಿ ಇವರು ನಿಯಮ 72 ರ ಮೇರೆಗೆ ಗಮನ ಸೆಳೆದ ಸೂಚನೆಗೆ ಉತ್ತರಿಸುವ ಬಗ್ಗೆ.**

**ವಿಷಯ:**

ರಾಜ್ಯದಲ್ಲಿ 46 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿವೆ. ಈ ಶಾಲೆಗಳ ಅಂದಾಜು 21 ಸಾವಿರ ಶಾಲಾ ಕೊಠಡಿಗಳು ಶಿಥಿಲಗೊಂಡು ಅಪಾಯಕಾರಿ ಸ್ಥಿತಿಯಲ್ಲಿದ್ದು, 13 ಸಾವಿರಕ್ಕೂ ಹೆಚ್ಚು ಶಾಲೆಗಳಲ್ಲಿ ಕೊಠಡಿಗಳ ಕೊರತೆ ಇದೆ. ಈ ವರ್ಷ ಸುರಿದ ಬೇಸಿಗೆ ಹಾಗೂ ಮುಂಗಾರು ಮಳೆಯಿಂದಾಗಿ ಶಾಲಾ ಕೊಠಡಿಗಳ ಗೋಡೆಗಳು ಬಾಗಿರುವುದು, ಮೇಲ್ಚಾವಣಿ ಕುಸಿಯುವುದು ಹೆಚ್ಚಾಗಿದೆ. ಮಕ್ಕಳು ಅಪಾಯಕಾರಿ ಸ್ಥಿತಿಯಲ್ಲಿರುವ ಕೊಠಡಿಗಳಲ್ಲೇ ಕುಳಿತು ಪಾಠ ಕೇಳಬೇಕಾದ ಸ್ಥಿತಿ ಇದ್ದು, ಅನಾಹುತಗಳು ಸಂಭವಿಸುವ ಸಾಧ್ಯತೆ ಹೆಚ್ಚಾಗಿದೆ.

ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳಲ್ಲಿ ಮೂರನೇ ಒಂದು ಭಾಗದಷ್ಟು ಶಿಕ್ಷಕರ ಖಾಲಿ ಹುದ್ದೆಗಳು ಸೇರಿದಂತೆ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳಲ್ಲಿ ಒಟ್ಟಾರೆ 61 ಸಾವಿರ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು ವಿದ್ಯಾರ್ಥಿಗಳ ಕಲಿಕೆ ಮತ್ತು ಫಲಿತಾಂಶದಲ್ಲಿ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ವರ್ಷದಿಂದ ವರ್ಷಕ್ಕೆ ಫಲಿತಾಂಶದಲ್ಲಿ ಕುಸಿತವಾಗುತ್ತಿದೆ.

ಬಡ, ಮಧ್ಯಮ ವರ್ಗದ ಲಕ್ಷಾಂತರ ವಿದ್ಯಾರ್ಥಿಗಳು ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಸರ್ಕಾರಿ ಶಾಲೆಗಳ ಸಮಸ್ಯೆಗಳನ್ನು ಬಗೆಹರಿಸದೆ ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದೆ. ಈ ಪ್ರಮುಖ ಸಮಸ್ಯೆಗಳ ಪರಿಹಾರಕ್ಕೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲದಿರುವ ಕುರಿತು ಮಾನ್ಯ ಶಾಲಾ ಅಭಿವೃದ್ಧಿ ಮತ್ತು ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ರಾಜ್ಯವಲಯದ ಮುಂದುವರೆದ ಯೋಜನೆಯಡಿ ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

- 2022-23ನೇ ಸಾಲಿಗೆ 1878 ಸರ್ಕಾರಿ ಶಾಲೆಗಳಲ್ಲಿನ 3620 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.4850.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
- 2023-24ನೇ ಸಾಲಿಗೆ 2162 ಸರ್ಕಾರಿ ಶಾಲೆಗಳಲ್ಲಿನ 7342 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ. 7000.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.
- 2024-25ನೇ ಸಾಲಿಗೆ 5744 ಸರ್ಕಾರಿ ಶಾಲೆಗಳಲ್ಲಿನ 13880 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.15129.66 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ ಹಾಗೂ SCP/TSP ಯೋಜನೆಯಡಿ 94

ಸರ್ಕಾರಿ ಶಾಲೆಗಳ 94 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ.170.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ.

- ಒಟ್ಟಾರೆಯಾಗಿ 2022-23ನೇ ಸಾಲಿನಿಂದ 2024-25ನೇ ಸಾಲಿನ ವರೆಗೆ ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ 9878 ಸರ್ಕಾರಿ ಶಾಲೆಗಳಲ್ಲಿನ 24936 ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ರೂ. 27149.66 ಲಕ್ಷಗಳ ಅನುದಾನ ಮಂಜೂರಾಗಿದ್ದು ಬಿಡುಗಡೆಯಾಗಿರುತ್ತದೆ, ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದೆ.
- ಕೆ.ಕೆ.ಆರ್.ಡಿ.ಬಿ ವತಿಯಿಂದ 2024-25ನೇ ಸಾಲಿನಲ್ಲಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗೆ ರೂ.5284.74 ಲಕ್ಷಗಳ ಅನುದಾನ ಮಂಜೂರಾಗಿದ್ದು ವಿವರ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

| District | Total Works | Completed | Under Progress | Allocation |
|---|---|---|---|---|
| ಬಳ್ಳಾರಿ | 5 | 0 | 5 | 34.60 |
| ಬೀದರ್ | 4 | 0 | 4 | 72.00 |
| ಕಲಬುರ್ಗಿ | 50 | 0 | 50 | 1711.03 |
| ಕೊಪ್ಪಳ | 2 | 2 | 0 | 25.54 |
| ರಾಯಚೂರು | 2 | 0 | 2 | 252.00 |
| ವಿಜಯನಗರ | 2 | 0 | 2 | 12.15 |
| ಯಾದಗಿರಿ | 220 | 0 | 220 | 3177.42 |
| **ಒಟ್ಟಾರೆ** | **285** | **2** | **283** | **5284.74** |

2022-23 ರಿಂದ 2024-25ನೇ ಸಾಲಿನವರೆಗೆ **<u>ಸರ್ಕಾರಿ ಶಾಲೆಗಳಲ್ಲಿ ಹೊಸ ಕೊಠಡಿಗಳನ್ನು ನಿರ್ಮಾಣ</u>** ಮಾಡಲು ಮಂಜೂರಾದ ಅನುದಾನದ ವಿವರ ಕೆಳಕಂಡಂತಿದೆ:

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಯೋಜನೆ ಮಂಜೂರಾದ ವರ್ಷ | ಯೋಜನೆ | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ | ಬಿಡುಗಡೆ ಮಾಡಲಾದ ವರ್ಷ | ಬಿಡುಗಡೆ ಮಾಡಲಾದ ಅನುದಾನ | ಮುಕ್ತಾಯಗೊಂಡ ಕೊಠಡಿಗಳ ಸಂಖ್ಯೆ | ಪ್ರಗತಿಯಲ್ಲಿರುವ ಕೊಠಡಿಗಳ ಸಂಖ್ಯೆ | ಪ್ರಾರಂಭವಾಗದಿರುವ ಕೊಠಡಿಗಳ ಸಂಖ್ಯೆ |
|---|---|---|---|---|---|---|---|---|---|
| 1 | 2022-23 | ವಿವೇಕ | 5435 | 77682.58 | 2022-23 | 46901.84 | 5200 | 230 | 5 |
| | | | | | 2023-24 | 16960.61 | | | |
| | | | | | 2024-25 | 11462.11 | | | |

| | | | | | | | | | |
|---|---|---|---|---|---|---|---|---|---|
| | | | 159 | 2342.60 | 2024-25 | 2342.60 | | | |
| 2 | 2024-25 | ಮುಂದುವರೆದ ಯೋಜನೆ | 784 | 11529.65 | 2024-25 | 10362.47 | 0 | 621 | 322 |
| ಒಟ್ಟು | | | **6378** | **91554.83** | | **88029.63** | **5200** | **851** | **327** |

- ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ –ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯವಿರುವ ಕೊಠಡಿಗಳ ನಿರ್ಮಾಣ/ದುರಸ್ತಿ/ಶೌಚಾಲಯಗಳ ನಿರ್ಮಾಣ ಮುಂತಾದವುಗಳ ಬಗ್ಗೆ ಸಂಬಂಧಪಟ್ಟ ಜಿಲ್ಲೆಗಳಿಂದ ಬರುವ ಪ್ರಸ್ತಾವನೆಗಳನ್ನು ಆಧರಿಸಿ ಮಂಜೂರಾದ/ಅನುಮೋದನೆಯಾದ ಕಾಮಗಾರಿಗಳಿಗೆ ಆಯಾ ಸಾಲಿನಲ್ಲಿ ಬಿಡುಗಡೆ ಆಗುವ ಅನುದಾನಕ್ಕೆ ಸೀಮಿತಗೊಳಿಸಿ PRED/PWD ಇಲಾಖೆ ವತಿಯಿಂದ ಕಾಮಗಾರಿಗಳನ್ನು ನಿರ್ಮಿಸಿ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗುತ್ತಿದೆ.(ಮಾಹಿತಿ ಮೂಲ ಸಮಗ್ರ ಶಿಕ್ಷಣ ಕರ್ನಾಟಕ)
- ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಕೇಂದ್ರ ಹಾಗೂ ರಾಜ್ಯವಲಯದ ಅನುದಾನದಲ್ಲಿ ಕಲ್ಯಾಣ ಕರ್ನಾಟಕ ವಿಭಾಗಕ್ಕೆ 2022-23 ರ ಸಾಲಿನಿಂದ 2024-25 ರ ಸಾಲಿನವರೆಗೆ ಈ ಕೆಳಕಂಡಂತೆ ಅನುದಾನ ಮಂಜೂರಾಗಿರುತ್ತದೆ.

| ಜಿಲ್ಲೆಯ ಹೆಸರು | ಮಂಜೂರಾದ ಅನುದಾನ | ಬಿಡುಗಡೆಯಾದ ಅನದಾನ |
|---|---|---|
| ಬಳ್ಳಾರಿ | 402.14 | 369.49 |
| ಬೀದರ್ | 339.06 | 295.55 |
| ಕಲಬುರ್ಗಿ | 1004.44 | 824.15 |
| ಕೊಪ್ಪಳ | 628.91 | 574.32 |
| ರಾಯಚೂರು | 761.62 | 715.24 |
| ವಿಜಯನಗರ | 1085.53 | 1000.45 |
| ಯಾದಗಿರಿ | 1030.08 | 905.96 |
| ಒಟ್ಟು | **5251.78** | **4685.16** |

ಯೋಜನಾವಾರು ಮತ್ತು ವರ್ಷವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ

- 2022-23ನೇ ಸಾಲಿನ, ಗಣಿಭಾದಿತ ಪ್ರದೇಶಗಳಲ್ಲಿ, ಗಣಿ ಪರಿಸರ ಪುನಃಶ್ಚೇತನ ಯೋಜನೆಗಳನ್ನು CEPMIZ ಯೋಜನೆಯಡಿ ಆಧ್ಯತೆ ಮೇರೆಗೆ ಅನುಷ್ಠಾನಗೊಳಿಸಲು ಬೇಕಾದ Priority Project ಗಳನ್ನು ಆಯ್ಕೆ ಮಾಡುವ ಕುರಿತು, ಕೆ.ಎಂ.ಇ.ಆರ್.ಸಿ ಕಛೇರಿಯಿಂದ ಗಣಿ ಭಾದಿತ ಪ್ರದೇಶವೆಂದು ಗುರುತಿಸಲಾದ 04 ಜಿಲ್ಲೆಗಳ ಪೈಕಿ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳೂ ಸಹ ಒಳಗೊಂಡಿದ್ದು ಈ ಜಿಲ್ಲೆಗಳ 03 ತಾಲ್ಲೂಕುಗಳಾದ ಬಳ್ಳಾರಿ, ಸಂಡೂರು, ಮತ್ತು ಹೊಸಪೇಟೆ ತಾಲ್ಲೂಕಗಳಲ್ಲಿ ತಾಲ್ಲೂಕಿಗೆ 10 ಶಾಲೆಗಳಂತೆ ಒಟ್ಟು 30 ಸರ್ಕಾರಿ ಶಾಲೆಗಳನ್ನು ಕೆ.ಪಿ.ಎಸ್ ಶಾಲೆಗಳಾಗಿ ಪರಿವರ್ತಿಸಲು ಅಂದಾಜು ಕರಡು ಕ್ರಿಯಾಯೋಜನೆ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.
- 2025-26ನೇ ಸಾಲಿಗೆ ಮುಂದುವರೆದ ಯೋಜನೆಯಡಿ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲೆಗಳನ್ನು ಒಳಗೊಂಡಂತೆ, ರಾಜ್ಯಾದ ಎಲ್ಲಾ ಜಿಲ್ಲೆಗಳಲ್ಲಿ ಕೊಠಡಿಗಳ ದುರಸ್ತಿ ಅವಶ್ಯಕತೆ ಇರುವ ಸರ್ಕಾರಿ ಶಾಲೆಗಳಿಗೆ ಒಟ್ಟು ರೂ.100.00ಕೋಟಿ ಅನುದಾನ ನಿಗಧಿಯಾಗಿದ್ದು, ಕ್ರಿಯಾಯೋಜನೆಯನ್ನು ಜಿಲ್ಲೆಗಳಿಂದ ಪಡೆಯಲಾಗುತ್ತಿದೆ.

**ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು**

ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳ ವಿವರ :-

| | |
|---|---|
| ಕಲ್ಯಾಣ ಕರ್ನಾಟಕದ 7 ಜಿಲ್ಲೆಗಳ ಎಲ್ಲಾ ವೃಂದಗಳ ಒಟ್ಟಾರೆ ಖಾಲಿ ಹುದ್ದೆಗಳ ಸಂಖ್ಯೆ-16577 | ಖಾಲಿ ಹುದ್ದೆಗಳಿಗೆದುರಾಗಿ ಅತಿಥಿ ಶಿಕ್ಷಕರ ನೇಮಕಾತಿ-12087 |
| ಕಲ್ಯಾಣ ಕರ್ನಾಟಕೇತರ ಖಾಲಿ ಹುದ್ದೆಗಳ ಸಂಖ್ಯೆ-33527 | 21940 |
| ಎಲ್ಲಾ ವೃಂದಗಳ ಒಟ್ಟಾರೆ ಖಾಲಿ ಹುದ್ದೆಗಳು-50104 | ಒಟ್ಟಾರೆ ಅತಿಥಿ ಶಿಕ್ಷಕರ ನೇಮಕಾತಿ -34027 |

- ಈ ಮೇಲಿನಂತೆ ಖಾಲಿ ಹುದ್ದೆಗಳಿಗೆ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಅತಿಥಿ ಶಿಕ್ಷಕರನ್ನು ಶೈಕ್ಷಣಿಕ ವರ್ಷದ ಅಂತ್ಯದವರೆಗೆ ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮವಹಿಸಿದೆ.
- ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024 ದಿನಾಂಕ:07.10.2024 ರ ಆದೇಶದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ 4882 ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರದ ಅನುಮತಿ ನೀಡಲಾಗಿದೆ. ಆದರೆ ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 388 ಸೇನೇನಿ 2024 ದಿನಾಂಕ:25/11/2024 ರ ಆದೇಶದಲ್ಲಿ ದಿನಾಂಕ 28/10/2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ. ಪ್ರಯುಕ್ತ ಸದರಿ ಹುದ್ದೆಗಳ ನೇಮಕಾತಿ ಅಧಿಸೂಚಿನೆ ಹೊರಡಿಸಲಾಗಿಲ್ಲ.

**ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರು**

ಸರ್ಕಾರಿ ಪ್ರೌಢ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ಖಾಲಿ ಇರುವ ಹುದ್ದೆಗಳ ವಿವರ:-

| ಕ್ರ.. ಸಂ | ಪ್ರದೇಶ | ಖಾಲಿ ಹುದ್ದೆಗಳ ಸಂಖ್ಯೆ | ಅತಿಥಿ ಶಿಕ್ಷಕರ ಸಂಖ್ಯೆ |
|---|---|---|---|
| 1 | ಕಲ್ಯಾಣ ಕರ್ನಾಟಕ ಪ್ರದೇಶ | 4005 | 3338 |
| 2 | ಕಲ್ಯಾಣ ಕರ್ನಾಟಕೇತರ ಪ್ರದೇಶ | 7581 | 6161 |
| ಒಟ್ಟು | | 11586 | 9499 |

ಈ ಮೇಲಿನಂತೆ ಖಾಲಿ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅಥವಾ ಖಾಯಂ ಹುದ್ದೆ ಭರ್ತಿ ಮಾಡುವವರೆಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಮೂಲಕ ಶಿಕ್ಷಕರ ಕೊರತೆಯನ್ನು ನೀಗಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024 ದಿನಾಂಕ:07.10.2024 ರ ಆದೇಶದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಹುದ್ದೆಗಳಲ್ಲಿ ಹಿಂದಿ ಭಾಷಾ ಶಿಕ್ಷಕರ ಹುದ್ದೆಗಳನ್ನು ಸೇರಿ ಪ್ರೌಢ ಶಾಲೆಗಳಿಗೆ 385 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 388 ಸೇನೇನಿ 2024 ದಿನಾಂಕ: 25/11/2024 ರ ಆದೇಶದಲ್ಲಿ ದಿನಾಂಕ 28/10/2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿದೆ. ಸದರಿ ಆದೇಶವನ್ನು ತೆರವುಗೊಳಿಸಿದ ಕೂಡಲೇ ಕ್ರಮವಹಿಸಲಾಗುವುದು.

**ಸಂಖ್ಯೆ: ಇಪಿ 240 ಯೋಸಕ 2025**

(ಎಸ್. ಮಧು ಬಂಗಾರಪ್ಪ)
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**